**ದಿನಾಂಕಃ 27/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು:** ಜೆಡಿಆರ್ ಪರ ಶ್ರೀ.ಸಿ.ಕೆ.ಎಂ **ವಕೀಲರಿಂದಃ**

1. ಜೆಡಿಆರ್ ರವರ ತಾತನ ಹೆಸರು ತಮ್ಮೇಗೌಡ. ತಮ್ಮೇಗೌಡರಿಗೆ ಎಷ್ಟು ಎಕರೆ ಜಮೀನು ಇತ್ತೆಂದು ಗೊತ್ತಿಲ್ಲ. ಜೆಡಿಆರ್ ರವರ ತಂದೆಯ ಹೆಸರು ಜವರೇಗೌಡ. ಜವರೇಗೌಡ ರವರ ಮಾಲೀಕತ್ವದಲ್ಲಿ ಚನ್ನಕಲ್ ಕಾವಲು ಗ್ರಾಮದ ಸರ್ವೆ ನಂ. 30 ರಲ್ಲಿ 1 ಎಕರೆ 20 ಗುಂಟೆ ಜಮೀನು ಇತ್ತು. ಚನ್ನಕಲ್ ಕಾವಲು ಗ್ರಾಮ ಮೊದಲು ಸರ್ಕಾರದವರ ಸುಪರ್ಧಿಯಲ್ಲಿತ್ತು, ನಂತರ ಹಲವಾರು ಜನರಿಗೆ ದರಕಾಸ್ತಿನಲ್ಲಿ ಮಂಜೂರು ಮಾಡಿದ್ದಾರೆ ಎಂದರೆ ಸರಿ.

2. ಪ್ರಭಾಕರ ರವರ ಹೆಸರಿನಲ್ಲಿ ಯಾವುದಾದರೂ ಜಮೀನು ಇದೆಯಾ ಎಂದರೆ ಇಲ್ಲವೆಂದು ನುಡಿಯುತ್ತಾ, ತಂದೆ ತೀರಿಕೊಂಡ ನಂತರ ತಾಯಿಯೊಂದಿಗೆ ಜಂಟಿಯಲ್ಲಿದೆ ಎಂದು ನುಡಿಯುತ್ತಾರೆ. ಜವರೇಗೌಡರ ಹೆಂಡತಿಯ ಹೆಸರು ಯಶೋಧಮ್ಮ. ಯಶೋಧಮ್ಮ, ಜವರೇಗೌಡರ ಮಕ್ಕಳ ಹೆಸರು ರವಿ ಮತ್ತು ಪ್ರಭಾಕರ. ಮೇಲ್ಕಂಡ 1 ಎಕರೆ 20 ಗುಂಟೆ ಜಮೀನಿನಲ್ಲಿ ಯಶೋಧಮ್ಮ, ರವಿ ಮತ್ತು ಪ್ರಭಾಕರ ರವರಿಗೆ ಭಾಗ ಇದೆ. ಮೇಲ್ಕಂಡ ಜಮೀನನ್ನು ಬಿಟ್ಟು ಅವರಿಗೆ ಇನ್ನೂ ಇತರೆ ಸ್ವತ್ತುಗಳು ಇವೆ. ಪ್ರಭಾಕರ, ರವಿ ಮತ್ತು ಅವರ ತಾಯಿಗೆ ಸಂಬಂಧಿಸಿದಂತೆ 12 ಗುಂಟೆ ಜಮೀನು, ಬ್ಯಾರೇನ್ ಲೈಸೆನ್ಸ್ ಪ್ರಭಾಕರ ರವರ ಹೆಸರಿನಲ್ಲಿ ಟಾಟಾ ಎಸಿ ವಾಹನ, ಹೀರೋಹೊಂಡಾ ಬೈಕ್, ದನಗಳು, ಆಡುಗಳು ಇವೆ. 12 ಗುಂಟೆ ಜಮೀನು ಒಟ್ಟು ಕುಟುಂಬದ ಸ್ವತ್ತಾಗಿದ್ದು ಅವರ ತಾಯಿಯ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಅದು ಒಟ್ಟು ಕುಟುಂಬದ ಆಸ್ತಿಯಲ್ಲ, ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಬ್ಯಾರೇನ್ ಲೈಸೆನ್ಸ್ ಯಶೋಧಮ್ಮ ನವರ ಹೆಸನರಿಲ್ಲಿದೆ. ಬ್ಯಾರೇನ್ ಮತ್ತು ಅದರ ಲೈಸೆನ್ಸ್ ಪ್ರಭಾಕರ ರವರ ಹೆಸರಿನಲ್ಲಿಲ್ಲ. ಬ್ಯಾರೇನ್ ಲೈಸೆನ್ಸ್ ಯಶೋಧಮ್ಮ ನವರ ಸ್ವಂತದ್ದು ಎಂದರೆ ಸರಿ. ಟಾಟಾ ಎಸಿ ವಾಹನ ಮತ್ತು ಹೀರೋಹೊಂಡಾ ಬೈಕ್ ನ ದಾಖಲಾತಿಗಳು ನನ್ನ ಬಳಿ ಇಲ್ಲ. ಸದರಿ ವಾಹನಗಳು ಮತ್ತು ಜಾನುವಾರುಗಳು ಪ್ರಭಾಕರ ರವರ ಬಳಿ ಇಲ್ಲ ಎಂದರೆ ಸರಿಯಲ್ಲ. ಪ್ರಭಾಕರ

ಕೂಲಿ ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರಭಾಕರ ರವರಿಗೆ ಯಾವುದೇ ಆದಾಯ, ಉತ್ಪತ್ತಿ ಇಲ್ಲ ಎಂದರೆ ಸರಿಯಲ್ಲ.

3. ನಾನು ಹಾಜರುಪಡಿಸಿದ ಆರ್.ಟಿ.ಸಿಗಳ ಜಮೀನುಗಳಲ್ಲಿ ಪ್ರಭಾಕರ ವ್ಯವಸಾಯ ಮಾಡುತ್ತಿಲ್ಲ ಮತ್ತು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಅವರು ಡಿಕ್ರಿಯಲ್ಲಿ ಕಾಣಿಸಿರುವ ಮೊತ್ತವನ್ನು ಕೊಡಲು ಸಮರ್ಥರಲ್ಲ ಎಂದರೆ ಸರಿಯಲ್ಲ. ಅವರು ಸಣ್ಣ ಹಿಡುವಳಿದಾರರು ಎಂದರೆ ಸರಿಯಲ್ಲ. ಅವರು ಋಣಮುಕ್ತ ಕಾಯಿದೆಯಡಿಯಲ್ಲಿ ಬರುವ ಕಾರಣ ಜಾರಿ ಅರ್ಜಿಯಲ್ಲಿ ಕಾಣಿಸಿರುವ ಮೊತ್ತವನ್ನು ನೀಡುವ ಹೊಣೆಗಾರಿಕೆ ಅವರಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**